ವಿಜಯವಾಣಿ
ಕನ್ನಡಿಗರ ಧ್ವನಿ

Wednesday 31st October 2018

# Kannada Ambari in RVCE Campus

ಕನ್ನಡಕ್ಕಾಗಿ ವಿಶೇಷ ವಾರ್ಷಿಕ ಕಾರ್ಯಕ್ರಮ | ವಿದ್ಯಾರ್ಥಿಗಳಿಂದ ಕನ್ನಡ ಕಲಿಕೆ

## ಆರ್‌ವಿ ಕಾಲೇಜಿನಲ್ಲಿ ಕನ್ನಡ ಅಂಬಾರಿ

**ಬೆಂಗಳೂರು:** 'ಕನ್ನಡ ಕಲಿ-ಕನ್ನಡ ನಲಿ-ಕನ್ನಡ ಅನುಭವ' ಕೋರ್ಸ್‌ನಲ್ಲಿ ಪ್ರತಿ ವರ್ಷ ಸಾವಿರಾರು ವಿದ್ಯಾರ್ಥಿಗಳಿಗೆ ಕನ್ನಡ ಕಲಿಸಲಾಗುತ್ತಿದೆ ಎಂದು ಆರ್.ವಿ.ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ. ಕೆ.ಎನ್. ಸುಬ್ರಹ್ಮಣ್ಯ ತಿಳಿಸಿದ್ದಾರೆ.

ವಿಜಯವಾಣಿ
ದಿಗ್ವಿಜಯ 24X7 NEWS
ಮಾಧ್ಯಮ ಸಹಯೋಗ

ಕನ್ನಡ ರಾಜ್ಯೋತ್ಸವ ಅಂಗವಾಗಿ **ವಿಜಯವಾಣಿ** ಮತ್ತು **ದಿಗ್ವಿಜಯ 24X7 ನ್ಯೂಸ್** ಸಹಯೋಗದಲ್ಲಿ ಮೈಸೂರು ರಸ್ತೆಯ ಆರ್.ವಿ. ಕಾಲೇಜಿನಲ್ಲಿ ಮಂಗಳವಾರ ಆಯೋಜಿಸಿದ್ದ 'ಅಂಬಾರಿ-18' ಕಾರ್ಯಕ್ರಮದಲ್ಲಿ ಮಾತನಾಡಿದರು. ಉತ್ತರ ಭಾರತದ ವಿದ್ಯಾರ್ಥಿಗಳಿಗೆ ಕನ್ನಡ ಕಲಿ, ಕನ್ನಡ ಗೊತ್ತಿದ್ದರೂ ಬರೆಯುವುದಕ್ಕೆ ಬರದಿದ್ದವರಿಗೆ ಕನ್ನಡ ನಲಿ ಮತ್ತು ಕನ್ನಡ ಚೆನ್ನಾಗಿ ಗೊತ್ತಿರುವವರಿಗೆ ಕನ್ನಡ ಅನುಭವ ಕೋರ್ಸ್ ಅನ್ನು ವಿದ್ಯಾರ್ಥಿಗಳು ಕಡ್ಡಾಯವಾಗಿ ಮಾಡಲೇಬೇಕು. ಪ್ರತಿ ವರ್ಷ ಸಾವಿರಾರು ವಿದ್ಯಾರ್ಥಿಗಳು ಈ ಕೋರ್ಸ್‌ನಲ್ಲಿ ಕನ್ನಡ ಕಲಿಯುತ್ತಿದ್ದಾರೆ ಎಂದರು.

**ಕನ್ನಡ ಭಾವನೆ ಭಾಷೆ:** ಆಂಗ್ಲ ವ್ಯಾಪಾರ ಭಾಷೆಯಾದರೆ ಕನ್ನಡ ಭಾವನೆ ಭಾಷೆಯಾಗಿದೆ. ಆಂಗ್ಲಕ್ಕೆ ಹೋಲಿಸಿದರೆ ಕನ್ನಡದಲ್ಲಿ ರಾಗ, ಭಾವ, ಸಾಹಿತ್ಯವಿದೆ. ನೂರಾರು ಅರ್ಥ ಕೊಡುವ ಭಾಷೆಯಾಗಿದೆ ಎಂದು ಖ್ಯಾತ ವಾಗ್ಮಿ ಪ್ರೊ.ಎಂ. ಕೃಷ್ಣೇಗೌಡ ತಿಳಿಸಿದರು.



ಆರ್.ವಿ.ಇಂಜಿನಿಯರಿಂಗ್ ಕಾಲೇಜಿನ ಅಂಬಾರಿ-18 ಕಾರ್ಯಕ್ರಮದಲ್ಲಿ 'ಪದ್ಯ ಸಿಕ್ಕಿತು' ಕೃತಿ ಬಿಡುಗಡೆ ಮಾಡಲಾಯಿತು.

### ಭರಪೂರ ಮನರಂಜನೆ

ರ್‍ಯಾಂಪ್‌ವಾಕ್, ಸಂಗೀತ, ಹುಲಿಕುಣಿತ, ಕೂಚಿಪುಡಿ, ನಾಸಿಕ್ ಡೋಲು, ಕಥಕ್, ಮುಖಾಭಿನಯ, ಗುರು-ಶಿಷ್ಯ ನಾಟಕ ಸೇರಿ ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟ ವಿದ್ಯಾರ್ಥಿಗಳಿಂದ ಪ್ರೇಕ್ಷಕರಿಗೆ ಭರಪೂರ ಮನರಂಜನೆ ಸಿಕ್ಕಿತು. ಕಾಲೇಜಿನ ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗದ ಪ್ರಾಧ್ಯಾಪಕ ಡಾ.ನಾಗರಾಜು ಜಿ. ಚೊಳ್ಳಿ, ರಂಜಿತಾ ನಾಗರಾಜು ದಂಪತಿಯ ಪುತ್ರಿ 7 ವರ್ಷದ ಗೆಹನಾ ಅವರ ಕೂಚಿಪುಡಿ ಪ್ರದರ್ಶನ ನೋಡುಗರ ಕಣ್ಮನ ಸೆಳೆಯಿತು.

ದಾಸರು, ಸಾಹಿತಿಗಳು ಮತ್ತು ಹೋರಾಟಗಾರರು ಬೆಳೆಸಿರುವ ಕನ್ನಡ ಮುಂದಿನ ತಲೆಮಾರಿನವರೆಗೂ ಉಳಿಸುವ ಕೆಲಸ ಆಗಬೇಕು. ರಾಷ್ಟ್ರೀಯ ಶಿಕ್ಷಣ ಸಮಿತಿ ದತ್ತಿಯಿಂದ ಪ್ರತಿ ವರ್ಷ ನಡೆಯುವ ಕನ್ನಡ ಹಬ್ಬದ ಕಾರ್ಯಕ್ರಮಗಳಿಗೆ ಸದಾ ಪ್ರೋತ್ಸಾಹ ಇದೆ.

| ಡಾ.ಎಂ.ಕೆ. ಪಾಂಡುರಂಗ ಶೆಟ್ಟಿ
ಅಧ್ಯಕ್ಷರು ರಾಷ್ಟ್ರೀಯ ಶಿಕ್ಷಣ ಸಮಿತಿ ದತ್ತಿ